ಅಪರಾಧಾ ಮಾಡ್ಯಾಳ ಅನ್ನೂ ಹಂಗ ಮಂಟವ್ವ ಜೀಂವಾ ಹಿಂಡಿ ಹಿಂಡಿ ಹಿಂಡಿ ಸತ್ತಳು. ಈಗರ ತನ್ನ ಕಳ್ಳುಕುಡಿ ಶಿವಮ್ಮನಾರಾ ಚೆಂದಾಗಿರ್ಬಾರದss ಶಿವನss ಬಸವಣ್ಣಾss?

ಒಂದಿನಾ ಕಣ್ಣೆ ಹರಕೊಂಡ್ ಬಂದ ಕರದಂಗ ಶಿವಮ್ಮ ಅವ್ವನ ಮನೀಗೆ ಬಂದ್ ಕುಂತ್ಲು "ಇದss ಬಾಳೇವು, ಇದ ಹಣೇಬರಾ ಅಂದ್ಕೊಂಡು ಬದ್ಕಾಕಹತ್ತಿದ್ಲು."

ಎಲ್ಲಿಂದ್ಲೋ ಪೆಂಡಾರ್ ಓಣಿ ಆಡು ಬಂದು ಹವೀಜಿಗೆ ಬಾಯಿ ಹಾಕಿದಕೂಡ್ಲೇ ಪಾರವ್ವ ಎಚ್ಚರಾಗಿ,

"ಅಯ್ಯ... ಸುಡ್ಲಿ... ಅವಕ್ಕೇನವ್ವಾ... ವಾಸನಿ ಬಡಿದ್ರ ಸಾಕು... ಹಿಂಡ ನುಗ್ಗಿ ಬರತಾವ್..." ಎನ್ನುತ್ತ ಹುಶ್ಯ್... ಹೂಶ್ಯ್ ಅಂದು ಬಡಗಿ ಸಪ್ಪಳಾ ವಮಾಡಿ ಆಡಿನ ಮರಿನ ಓಡ್ಸಿ ಮತ್ತ ಬಂದು ಕಟ್ಟೆತುದಿಗೆ ಕುಂತಳು. ಕಣ್ ಕಿರಿದು ಮಾಡಿ ನೆಪ್ಪ ಮಾಡ್ಕೋಂತ.

ಶಿವಮ್ಮಂದ ಹೋಗ್ಲಿ ಇನ್ನೂ ಎಳೀಜೀವ. ಮುಂದರ ಚೋಲೋ ಅದೀತು. ಮಾಲಿಂಗ ಹೇಂತಿ ಬ್ಯಾಡಾ ಬ್ಯಾಡ ಅಂತಂದ್ರೂ ಕಾಲು ಕೆದರಿ ಜಗಳಾ ಮಾಡಕ್ ಇಲ್ಲಿಗೆ ಬಂದಾಗೊಮ್ಮೆ ಹ್ಯಾಂಗರ ಮಾಡಿ ಪಾರವ್ವನ ಕಣ್ಣ ತಪ್ಪಿಸಿ ಶಿವಮ್ಮನ ಜತಿ ಮಕ್ಕೊಂಡss ಹೋಗತಿದ್ದ. ಅದ ತಂದss ಹಕ್ಕ ಅಂದ್ಕೊಂಡ. ಅದೇನು ಸಿಟ್ಟೋ ಹ್ಯಾಂವ್ಕೋ ತಿಳಿದನ ಶಿವಮ್ಮ ಅವನ ಗುದ್ದ್ಯಾಟದಲ್ಲೇ ಸುಖದಾಗೋ. ಬ್ಯಾನ್ಯಾಗೋ ನರಳ್ಯಾಡತಿದ್ಲು. ಅಳಿಯಾ –ಮಗಳು ನೆಟ್ಟಗ ಬಾಳಿದ್ರ ಸಾಕಲ್ಲ ಅಂದ್ಕೋಂಡ್ ಪಾರವ್ವ ಅಡ್ಡಿಮಾಡದ ಮನಸ್ಸಿನ್ಯಾಗ ಹಿಗ್ಗಿ ಹೀರೇಕಾಯಿ ಆಗ್ತಿದ್ಲು. ಇನ್ನೊಂದ್ ಕೂಸಾದ್ರ ಯಾಕ ಆಕ್ಕೊವಲ್ದು ಶಿವಮ್ಮಗ ಅಂತಂದು.

ಆದ್ರ ಮಣ್ಣು ಮುಕ್ಕಿದ ತನ್ನ ಬಾಳೆದ ನೆನಪ ಒತ್ತ್ರಿಸಿಕೊಂಡ್ ಬಂದ್ರ ಅಷ್ಟ ನೋಯ್ತಿದ್ದಳು. ತನ್ನದನ್ನ ಹೆಂಗ ಜನಾ ಹರ್ಕೊಂಡು ಮುಕ್ಕಿದ್ರು ಅಂತನಸಿ ಭಾಳ ಸಂಕ್ಟಾ ಪಡತಿದ್ಲು. ಇಲ್ಲss ದ್ ಸಲ್ಲದ್ ಕತೀ ಕಟ್ಟಿ ಅಕೀಯೊಬ್ಬ ಸೂಳಿ ಅನ್ನೂ ಹಾಂಗ್ ನಡಕೊಂಡ್ರು. ಹೆಂಗಸಿಗೆ ಹೆಂಗಸ ವೈರಿ ಅನ್ನೋದು ಸುಳ್ಳಾಗದಂಗ ಮಂಟವ್ವ ಮಾಡಬಾರದ್ದನ್ನೆಲ್ಲಾ ಮಾಡಿದ್ಲು. ಮನಶ್ಯಾರಿಗೆ ಇನ್ನೊಬ್ರ ಸುಖಾನೂ ನೋಡಾಕ್ ಆಗೂದಿಲ್ಲ. ಅದರಾಗೂ ಈ ಓಣಿ ಜನರಿಗೆ ಯಾರೂ ಚಲೋ ಇರ್ಬಾರ್ದು. ಬ್ಯಾರೆಯವ್ರ ಎಲ್ಯಾಗ ಏನೈತಿ ಅಂತ ಹಣಿಕಿ ಹಾಕ್ತಾರ ತಮ್ಮ ಎಡ್ಯಾಗ ನೊಣಾ ಸತ್ತ್ ಬಿದ್ದ್ರೂ ಖಬರಿರೂದಿಲ್ಲ.

ಕಣ್ಣಾಗ ನೀರ್ ತುಂಬ್ಕೊಂಡ ಪಾರವ್ವ ಸಂಚಿಯಿಂದ ಎಲಿ ಅಡಕೀ ತಗದು ಸುಣ್ಣಾ ಸವರಿ ಬಾಯಾಗ್ ಇಟ್ಕೋಳ್ಳಾಕ್ ಹೋಗಿ ಸ್ವಲ್ಪ ತಡದ್ಲು. ಕೈಯ್ಯಾಗ ಮಡಿಚಿ ಹಿಡ್ಕೊಂಡ ಎಲಿ ಅಡಕಿ ನೋಡಿ ಮೊದ್ಲ ಹನಿ ಆಡಾಕ್ ಹತ್ತಿದ್ ಅಕೀ ಕಣ್ಣಾಗಿಂದ ಪಳಕ್, ಪಳಕ್ ಅಂತ ಒಂದರೆಡ್ ಹನಿ ಉಳ್ಳೇಬಿಟ್ವು ಗಲ್ಲಕ್ಕ...

ಇವತ್ತೊಂದಿನಾ ಅಲ್ಲ, ಅಕೀಗೆ ಯಾವಾಗ್ಲೂ ಹೀಂಗನss. ಎಲೀ ಅಡಿಕಿ ಹಾಕ್ಕೋಬೇಕು ಅನ್ನಿದಾಗೆಲ್ಲ ಒಂದ್ ಸುತ್ತು ಕಣ್ಣೀರ್ ಹಾಕೀನ ಅಕೀ ಬಾಯಾಗ್ ಹಾಕ್ಕೋತಿದ್ಲು. ಎಲಿ ಅಡಕಿ ಅಂದ್ರ ಪಾರವ್ವಗ ಶ್ರೀಪಾದಾಚಾರು ನೆನಪಾಗ್ತಿದ್ರು. ಮತ್ತ ತಮ್ಮ ಹಳೇ ದೊಡ್ಡಮನೀ ನೆನಪು ಕಾಡ್ತಿತ್ತು ಅಕೀಗೆ. ಅವ್ರಿಗೆ ಎಲಿಅಡಕಿ ಅಂದ್ರ ಎಷ್ಟ ಪಿರಿತಿ ಇತ್ತು. ಯಾರಾರ ಎರ್ಡ ನಿಮಿಷ ಮಾತಿಗೆ ಸಿಕ್ರೂ ಸಾಕೂ..." ಎಲೀ ಅಡಕೀ ಇದ್ರ ಕೊಡ್ರಪಾ ಅಂತ ಇಸ್ಕೊಳ್ಳಾಕ ಸಣ್ಣ ಹುಡ್ಗೂರ ಹಂಗ ಕೈ ಒಡ್ಡತಿದ್ದ್ರು.

ಇದ್ರ ಬಾಯಿಗೆ ಹಾಕ್ಕೊಂಡ ಮುಂದಿನ ಮಾತು. ತಮ್ ಮನ್ಯಾಗ ಎಲಿಅಡಕೀ ಮುಗಿದಿದ್ರ ತಮ್ಮ ಅಟ್ಟದ್ ಮ್ಯಾಲಿನ ಕ್ವಾಣಿ ಕಿಟಗ್ಯಾಗಿಂದ ಹಣಿಕಿ ಹಾಕಿ, ಅಲ್ಲೇ ಗಿರಣ್ಯಾಗ ಕುಂತಿದ್ದ